ಬೆಳಗ್ಗೆ ಡಾಕ್ಟರು ಮಗೂನ ಮೈಸೂರಿನ ಆಸ್ಪತ್ರೆಗೆ ಕರ್‍ಕೊಂಡು ಹೋಗಿ ಅಂತ ಹೇಳಿದ್ರು. ಅದಕ್ಕೆ ನಾವಿಬ್ಬರೂ ಸೇರಿ ಕರ್‍ಕೊಂಡು ಹೋಗ್ತಿದ್ವಿ. ದಾರೀಲಿ ಹಿಂಗಾಯ್ತು." ಎಂದು ನುಡಿದು ಮತ್ತಷ್ಟು ಗಳಗಳನೆ ಅತ್ತಳು. ಆ ಕೂಸಿನ ತಾಯಿಯಂತೂ ಈ ಲೋಕದ ಪರಿವೆಯೇ ಇಲ್ಲದಂತೆ ತನ್ನ ಭುಜದ ಮೇಲೆ ಸೆರಗು ಇದೆಯೇ ಎಂಬುದನ್ನು ಮರೆತು, ಬುರ್ಖಾದ ತಲೆವಸ್ತ್ರವನ್ನು ಒಂದುಕಡೆ ತೂರಾಡಿಸುತ್ತಾ ಬಸ್ಸಿನಿಂದ ಇಳಿದಳು. ಮುಂದೇನು ಮಾಡಬೇಕು ಎಂಬ ದೊಡ್ಡ ಸಮಸ್ಯೆ ಎಲ್ಲರಿಗೆ ಎದುರಾಯಿತು.

ಆದರೂ ಖಲಂದರ್‌ಗೆ ಆಶ್ಚರ್ಯ ಮತ್ತು ನಾಯಕ್‌ಗೆ ಕೂಡ ಆಶ್ಚರ್ಯ. "ಇಂತಹ ದುರ್ಭರ ಸಂದರ್ಭದಲ್ಲಿ ಮನೆಯ ಗಂಡಸರು ಯಾರಾದರೂ ಜೊತೆಯಲ್ಲಿ ಇರಬಾರದೆ?" ಎಂದು ಖಲಂದರ್ ಅಚಾನಕವಾಗಿ ಕೇಳಿದ.

"ಹೊಳೆನರಸೀಪುರದಲ್ಲಿ ಯಾರ ಪೈಕಿ ನೀವು?"

ಆ ಮಹಿಳೆ ಹೇಳಿದಳು: "ನಮ್ಮ ಯಜಮಾನರ ಹೆಸರು ನಾಸಿರ್ ಖಾನ್ ಅಂತ. ತುಂಬಾ ಒಳ್ಳೆ ಮನುಷ್ಯ. ಅಲ್ಲಾ ಅವರನ್ನು ಕರಕೊಂಡು ಬಿಟ್ಟ." ಖಲಂದರ್‌ಗೆ ಆಘಾತ ಮಾತ್ರ ಆಗಲಿಲ್ಲ ಬದಲಿಗೆ ವಜ್ರಾಘಾತವಾಯಿತು. ಅವನು ನಖಶಿಖಾಂತ ನಡುಗಿ ಬಿಟ್ಟ. ನಾಸಿರ್‌ನ ಹೆಂಡತಿಯೇ ಈಕೆ? 'ಹೊಳೆನರಸೀಪುರದ ನಾಸಿರ್‌ನ ಮಗಳಾದ ನೂರ್ ಫಾತಿಮಾ ಹೀಗೆ ಇಂಥ ಸನ್ನಿವೇಶದಲ್ಲಿ ಮುಖಾಮುಖಿಯಾಗುತ್ತಾಳೆ ಅಂತ ತನಗೇನು ಗೊತ್ತಿತ್ತು? ಸುವರ್ ಇನಾಯತ್‌ನ ಮಗುವೇ ಇದು? ಅಲ್ಲಾಹ್ ಎಂತಹ ಸಂದರ್ಭ... ಯಾಕೆ ಈ ರೀತಿ ಬಡವರ ಪರೀಕ್ಷೆ ಮಾಡುತ್ತೀಯ?' ಎಂದು ಅವನು ಅತ್ಯಂತ ದುಃಖಿತನಾದ. 'ಆದರೂ ಇನ್ನಷ್ಟು ಖಚಿತಪಡಿಸಿಕೊಳ್ಳಬೇಕು' ಎಂದೆನಿಸಿ,

''ನಿನ್ನ ಹೆಸರು ನೂರ್ ಫಾತಿಮಾ?...'' ಎಂದು ಪ್ರಶ್ನಾರ್ಥಕ ನೋಟ ಬೀರಿದ.

ಅವಳು 'ಹೌದು...' ಎಂದು ತಲೆಯಾಡಿಸಿದಳು. ಆದರೂ ಅವನು ಖಚಿತ ಪಡಿಸಿಕೊಳ್ಳುವಂತೆ ಕೇಳಿದ, "ನಿನ್ನನ್ನು ಹಾಸನದ ಇನಾಯತ್‌ಗೆ ಮದುವೆ ಮಾಡಿಕೊಟ್ಟಿದ್ದರಾ?" ಆ ದುಃಖದಲ್ಲೂ ಅವಳು ಹೌದೆಂದು ತಲೆಯಾಡಿಸಿದಳು. ಖಲಂದರ್‌ನ ಕಣ್ಣುಗಳು ತುಂಬಿ ಬಂದವು. ಮುಂದೇನು ಮಾಡಬೇಕು ಎಂಬುದು ಅವನಿಗೆ ತಿಳಿಯದೆ ಅಸಹಾಯಕನಂತೆ ನಿಂತಿದ್ದ.

ಬಸ್ಸು ಹಳೆ ಕೋಟೆಯನ್ನು ಕೂಡ ದಾಟಿತ್ತು. ನಾಯಕ್ ಮುಂದೇನು ಮಾಡಬೇಕೆಂಬ ಚಿಂತೆಯಲ್ಲಿದ್ದಾಗ ರಘುವಿಗೆ ಸಿಟ್ಟೇರಿತ್ತು. ''ಇಲ್ಲೇ ನಿಂತು ಶವ ಪಂಚನಾಮೆ ಮಾಡಿಕೊಂಡು ಹಾರ ಹಾಕಿಸಿಕೊಂಡು ನಿಂತಿರ್ತೀಯೋ ಇಲ್ಲಾ ಪ್ರೋಗ್ರಾಮಿಗೆ ಹೋಗ್ತೀಯೋ?'' ಎಂದು ನಾಯಕ್‌ನನ್ನು ದಬಾಯಿಸಿದ. ಧುತ್ತನೆ ಎದುರಿಗೆ ಬಂದೆರಗಿದ ಸಮಸ್ಯೆಯನ್ನು ನಿಭಾಯಿಸುವುದೋ ಈ ಕೋಳಿ ಜಗಳದಲ್ಲಿ ಬೆತ್ತಲೆಯಾಗುವುದೋ ತಿಳಿಯದೆ ನಾಯಕ್ ಅವನನ್ನು ಒಮ್ಮೆ ದುರುಗುಟ್ಟಿ ನೋಡಿದ. ತಾಯಿ ಮಗಳನ್ನು ಬಸ್ ಹತ್ತಿಸಿಕೊಂಡು ಹೋಗಿ ಹೊಳೆನರಸೀಪುರದಲ್ಲಿ ಬಿಡುವುದೇ? ಅಥವಾ ತಾಯಿ ಮತ್ತು ಮಗಳನ್ನು ಅವರ ಪಾಡಿಗೆ ಅವರನ್ನು ಬಿಟ್ಟು ತಾವು ಪ್ರಯಾಣ ಮುಂದುವರೆಸುವುದೇ? ಎಂಬುದು ಅವನ ಮುಂದಿದ್ದ ಪ್ರಶ್ನೆಗಳಾಗಿದ್ದವು. ಏನೊಂದು ನಿಶ್ಚಯಕ್ಕೂ ಬಾರದೆ ಅವನು ಖಲಂದರ್‌ನತ್ತ ಸಂದಿಗ್ಧ ನೋಟವನ್ನು ಬೀರಿದ. ಅದೇ ವೇಳೆಗೆ ಖಲಂದರ್‌ನ ಮನಸ್ಸು ವೇಗವಾಗಿ ಇನ್ನೊಂದೆಡೆ ಓಡುತ್ತಿತ್ತು. ತಾನೇ ಅವರಿಬ್ಬರನ್ನು ಹೊಳೆನರಸೀಪುರಕ್ಕೆ ಕರೆದೊಯ್ದು, ಅಲ್ಲಿ ಅವರ ಮನೆಗೆ ಬಿಟ್ಟು ಅಲ್ಲಿಯೇ ಮಗುವಿನ ಅಂತ್ಯಕ್ರಿಯೆಯನ್ನು ಮಾಡಿ ಸಾಧ್ಯವಾದರೆ ಮೈಸೂರಿಗೆ ಹೋಗಬೇಕು, ಇಲ್ಲವಾದರೆ ಹಾಸನಕ್ಕೆ ಮರಳಬೇಕೆಂದು ಅವನು ನಿಶ್ಚಯಿಸಿದ.

ರಘುವಿಗೆ ಸಿಟ್ಟೇರುತ್ತಿತ್ತು. ಅವನು ದಿಢೀರನೆ ಬಸ್ಸನ್ನು ಹತ್ತಿದವನೇ, ''ರೈಟ್ ರೈಟ್'' ಎಂದು ಜೋರಾಗಿ ಕಿರುಚಿದ. ''ಆ ಡ್ರೈವರ್ ಸೂಳೆ ಮಗನ್ನ ಬರ ಹೇಳ್ರೋ'' ಎಂದು ಆರ್ಭಟಿಸಿದ. ಆದರೆ,